ಇಂದು ದಿನಾಂಕ 17-06-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಜಿ.ಜಿ.ಜಿ. ವಕೀಲರಿಂದಃ**

**3.** ಕುಮಟಾ ತಾಲೂಕಿನ ದೇವಗಿರಿ ಗ್ರಾಮದ ಸ.ನಂ. 24, 26/3, 27/7, 29/5, 29/7, 30/1, 36/1 ಕ, 36/2 ಬ ಇವು ಹಿಂದೆ ದುರ್ಗಿ ಕ್ಷೇತ್ರಪಾಲ್ ಅಡಿ ಇವರಿಗೆ ಸೇರಿದಂತಹ ಆಸ್ತಿಗಳು ಎಂದರೆ ಸರಿ . ದುರ್ಗಿ ಕ್ಷೇತ್ರಪಾಲ್ ಅಡಿ ಇವರು 1 ನೇ ಪ್ರತಿವಾದಿಗೆ ವಿಲ್ ಮೂಲಕ ಸದರಿ ಆಸ್ತಿಗಳನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿ . ಸದರಿ ವಿಲ್‌ನಾಮೆಗೆ ನನ್ನದಾಗಲೀ, 1 ಮತ್ತು 2 ನೇ ವಾದಿಯರ ತಕರಾರು ಇಲ್ಲ ಎಂದರೆ ಸರಿ.

**4.** ದೇವಗಿರಿ ಗ್ರಾಮದ ಆಸ್ತಿ ಸ .ನಂ. 71 ಅ/1 ಮತ್ತು 71 ಅ/3 ಇವು ಮೊದಲಿನಿಂದಲೂ ನನ್ನ ಅಜ್ಜನಾದ ಕ್ಷೇತ್ರಪಾಲ್ ಅಡಿ ಇವರ ಒಟ್ಟೂ ಕುಟುಂಬದ ಆಸ್ತಿಗಳಾಗಿವೆ ಎಂದರೆ ಸರಿ. ನನ್ನ ಅಜ್ಜನಿಗೆ ಗಣಪತಿ ಹಾಗೂ ನಾಗಪ್ಪ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ದಾವಾಸ್ತಿಯನ್ನು ಗಣಪತಿಯ ವಾರಿಸುದಾರರಿಗೆ ಹಾಗೂ ನಾಗಪ್ಪರವರ ವಾರಿಸುದಾರರಿಗೆ ಯಾವುದೇ ತಕರಾರು ಇಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಪ್ರತಿವಾದಿ 2 ರಿಂದ 13 ರವರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ